# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.880/2016/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 3.4.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಕಡಬ ಗ್ರಾಮದ ಸರ್ವೆ ನಂ. 125 ಸರ್ಕಾರಿ ಖರಾಬು ಜಮೀನಿನ ಒತ್ತುವರಿ ತೆರವುಗೊಳಿಸಿ ಇದನ್ನು ಸಾರ್ವಜನಿಕ ಸಂಪರ್ಕರಸ್ತೆಯಾಗಿ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀಮತಿ ಹೆಚ್. ಇಂದ್ರಾಮಣಿ, ಮಾಗಡಿ ರಸ್ತೆ, ಬೆಂಗಳೂರು ನಿವಾಸಿ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ತಹಶೀಲ್ದಾರ್, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಗುಬ್ಬಿ ತಾಲ್ಲೂಕು ಕಡಬ ಗ್ರಾಮದ ಸರ್ವೆ ನಂ.125ಕ್ಕೆ ಹೊಂದಿಕೊಂಡಂತೆ ಸುಮಾರು 20–30 ಕುಟುಂಬಗಳು ತಮ್ಮ ಖಾಸಗಿ ಜಮೀನುಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ. ಈ ಮನೆಗಳ ಮುಂದೆ ಇರುವ ಸರ್ಕಾರಿ ಖರಾಬು ಜಮೀನನ್ನು ಸಂಪರ್ಕ ರಸ್ತೆಯನ್ನಾಗಿ ಉಪಯೋಗಿಸುತ್ತಿದ್ದಾರೆ. ಆದರೆ ಈ ಗ್ರಾಮದ ಶ್ರೀಮತಿ ಸಿದ್ದಗಂಗಮ್ಮ ಎಂಬುವವರು ಈ ಸರ್ಕಾರಿ ಖರಾಬನ್ನು ತಮ್ಮ ಹೆಸರಿಗೆ ಮಂಜೂರು ಮಾಡಿಸಿಕೊಂಡು ಅಲ್ಲಿ ಅಕ್ರಮವಾಗಿ ಹುಲ್ಲಿನ ಬಣವೆ ಹಾಕಿರುತ್ತಾರೆ. ಮಾನ್ಯ ತಹಶೀಲ್ದಾರ್ ಅವರಿಗೆ ಈ ಖರಾಬಿನ ಬಗ್ಗೆ ಮಾಹಿತಿ ಕೋರಿದಾಗ ಅವರ ಹಿಂಬರಹ ಸಂಖ್ಯೆ : ಎಲ್‌ಎನ್‌ಡಿಸಿಆರ್ 11/2014–15 ದಿ.18.12.2014ರಲ್ಲಿ ಸ.ನಂ.125ರ ಸರ್ಕಾರಿ ಖರಾಬನ್ನು ಯಾರಿಗೂ ಹಂಚಿಕೆ ಮಾಡಿರುವುದಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಈ ಖರಾಬನ್ನು ತೆರವುಗೊಳಿಸಿ ತಮಗೆ ಸಂಪರ್ಕ ರಸ್ತೆಯನ್ನಾಗಿ ಮಾಡಿಕೊಡಲು ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ

ಸಹಾ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸರ್ವೆ ನಂ.125ರ ಸರ್ಕಾರಿ ಖರಾಬು ಜಮೀನಿನ ಪಹಣಿ ಕಾಲಂ.3ರಲ್ಲಿರುವಂತೆ ಒಟ್ಟು ಕ್ಷೇತ್ರ 1.12 ಎಕರೆ ಆ ಪೈಕಿ 17 ಗುಂಟೆ ಬಿ.ಖರಾಬು ಇದ್ದು, ಉಳಿಕೆ 35 ಗುಂಟೆ ಅಂತ ಇರುತ್ತದೆ. ಕಾಲಂ.ನಂ.9ರಲ್ಲಿ ಕೆ.ಹೆಚ್. ಸಿದ್ದಗಂಗಮ್ಮ 32 ಗುಂಟೆ, ಕಾವೇರಿ ನಿಗಮಕ್ಕೆ 3 ಗುಂಟೆ ಎಂದು ದಾಖಲಾಗಿರುತ್ತದೆ. ತಾಲ್ಲೂಕು ಸರ್ವೆಯರ್ ಅವರ ಸ್ಕೆಚ್ ಹಾಗೂ ವರದಿಯಂತೆ ಸರ್ವೆ ನಂ.125ರಲ್ಲಿ 23 ಗುಂಟೆ ಖರಾಬು ಜಮೀನು ಒತ್ತುವರಿಯಾಗಿದ್ದು, ಅವರೆಂದರೆ ಶ್ರೀ ರಾಮಣ್ಣ, 01 ಗುಂಟೆ, ಶ್ರೀನಿವಾಸ-9 ಗುಂಟೆ, ಸಣ್ಣನಂಜಯ್ಯ, ಸಿದ್ದಗಂಗಮ್ಮ-6 ಗುಂಟೆ, ಗುರುಮೂರ್ತಿ-8 ಗುಂಟೆ ಒತ್ತುವರಿ ಮಾಡಿರುತ್ತಾರೆ. ದಿ.6.9.2016ರಂದು ಒತ್ತುವರಿ ತೆರವುಗೊಳಿಸುವಂತೆ ತಿಳುವಳಿಕೆ ಪತ್ರ ನೀಡಲಾಗಿರುತ್ತದೆ. ಆದ್ದರಿಂದ ಈ ಪ್ರಕರಣದ ಬಗ್ಗೆ ಈಗಾಗಲೇ ಕ್ರಮಕೈಗೊಳ್ಳಲಾಗಿದ್ದು, ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರ ಹಾಗೂ ಇತರ 20-30 ಜನರು ತಮ್ಮ ಜಮೀನುಇಗಳಲ್ಲಿ ಮನೆ ಕಟ್ಟಿಕೊಂಡಿದ್ದು, ಅವರಿಗೆ ಸ.ನಂ.125ರಲ್ಲಿರುವ ಖರಾಬು ಜಮೀನು ಸಂಪರ್ಕರಸ್ತೆಯಾಗಿದೆಯೆಂದು ತಿಳಿಸಿರುತ್ತಾರೆ. ಎದುರುದಾರರು ಸಹ ಈ ಸಂಪರ್ಕ ರಸ್ತೆಯನ್ನು ಶ್ರೀ ರಾಮಣ್ಣ ಹಾಗೂ ಇತರರು ಒತ್ತುವರಿ ಮಾಡಿಕೊಂಡಿದ್ದಾರೆಂದು ಒಪ್ಪಿಕೊಂಡು 6.9.2016ರಂದು ಒತ್ತುವರಿ ತೆರವುಗೊಳಿಸುವಂತೆ ತಿಳುವಳಿಕೆ ಪತ್ರ ಸಹ ನೀಡಿರುತ್ತಾರೆ. ಆದರೆ ಇದುವರೆಗೆ ಒತ್ತುವರಿ ತೆರವುಗೊಂಡಿರುವುದಿಲ್ಲ.

6. ಸರ್ಕಾರಿ ಖರಾಬು ಜಮೀನನ್ನು ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ಒತ್ತುವರಿಮಾಡಿಕೊಂಡಿದ್ದು, ಇದರಿಂದ ಇನ್ನುಳಿದ ಸಾರ್ವಜನಿಕರಿಗೆ ಸಂಪರ್ಕ ರಸ್ತೆ ಇಲ್ಲವಾಗಿದೆಯೆಂದು ಕಂಡುಬರುತ್ತದೆ. ಎದುರುದಾರರು ದಿ.6.9.2016ರಂದು ಒತ್ತುವರಿ ಮಾಡಿದ ಶ್ರೀ ರಾಮಣ್ಣ ಹಾಗೂ ಇತರೆ 5 ಜನರಿಗೆ

ತಿಳುವಳಿಕೆ ಪತ್ರ ನೀಡಿದ ಪ್ರತಿ ಲಭ್ಯವಿರುತ್ತದೆ. ಆದರೆ ಅದನ್ನು ತೆರವುಗೊಳಿಸಲು ಇನ್ನೂ ಪರಿಣಾಮಕಾರಿ ಕ್ರಮಕೈಗೊಂಡಿಲ್ಲವೆಂಬುವುದು ಕಂಡುಬರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಕಡಬ ಗ್ರಾಮದ ಸರ್ವೆ ನಂ. 125 ಸರ್ಕಾರಿ ಖರಾಬು ಜಮೀನನ್ನು ಒತ್ತುವರಿಮಾಡಿಕೊಂಡ ಶ್ರೀ ರಾಮಣ್ಣ, 01 ಗುಂಟೆ, ಶ್ರೀನಿವಾಸ-9 ಗುಂಟೆ, ಸಣ್ಣನಂಜಯ್ಯ, ಸಿದ್ದಗಂಗಮ್ಮ, – 6 ಗುಂಟೆ, ಗುರುಮೂರ್ತಿ–8 ಗುಂಟೆ ಇವರಿಂದ ತೆರವುಗೊಳಿಸಿ ಇದನ್ನು ಸಾರ್ವಜನಿಕ ಸಂಪರ್ಕರಸ್ತೆಯಾಗಿ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 3/4/17

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.